# ಯಾವುದು ಭಾಗ್ಯ?

‘ಚಂದ್ರಮತಿಯ ಪ್ರಲಾಪ’ ಹರಿಶ್ಚಂದ್ರ ಕಾವ್ಯದ ಹೃದ್ಯ ಸನ್ನಿವೇಶಗಳಲ್ಲೊಂದು. ಹಾವಿನ ಕಡಿತದಿಂದ ಲೋಹಿತಾಶ್ವ ಕೊನೆಯುಸಿರೆಳೆದಿದ್ದಾನೆ. ಚಕ್ರವರ್ತಿಯಾಗಬೇಕಿದ್ದ ಕುಮಾರ ಕಾಡಿನ ನಡುವೆ ಅನಾಥಶವವಾದುದನ್ನು ನೋಡಿ ತಾಯಿಯ ಕರುಳಿಗೆ ಕೊಳ್ಳಿಯಿಟ್ಟಂತಾಗಿದೆ. ಮಗನ ದೇಹಕ್ಕೆ ಕೊಳ್ಳಿಯಿಡಲು ಮಸಣದ ಕಾವಲುಗಾರನ ಅಡ್ಡಿ. ‘ಮಸಣದ ಬಾಡಿಗೆ’ ಪಾವತಿಸದೆ ಹೆಣ ಸುಡಲು ಅನುಮತಿಯಿಲ್ಲ ಎಂದವನ ಪಟ್ಟು. ಚಂದ್ರಮತಿ ತನ್ನ ದೀನಸ್ಥಿತಿಯನ್ನು ಅರುಹಿದರೂ, ಚಿಕ್ಕಾಸೂ ಇಲ್ಲದ ಅಸಹಾಯಕತೆಯನ್ನು ಮನವರಿಕೆ ಮಾಡಿಸಿದರೂ ಮಸಣದ ಕಾವಲುಗಾರನ ನಿರ್ಧಾರ ಬದಲಾಗುವುದಿಲ್ಲ. ಆತ ಒಡೆಯನಿಗೆ ನಿಷ್ಠ, ಕರ್ತವ್ಯಕ್ಕೆ ಬದ್ಧ. ನತದೃಷ್ಟ ತಾಯಿಯ ಗೋಳಾಟ ನೋಡಲಾಗದೆ ಆತ ಒಂದು ಉಪಾಯ ಸೂಚಿಸುತ್ತಾನೆ: ‘ನಿನ್ನ ಕೊರಳಲ್ಲಿರುವ ಮಾಂಗಲ್ಯವನ್ನು ಮಾರಿ ಮಸಣದ ಬಾಡಿಗೆ ಭರಿಸು’. ಚಂದ್ರಮತಿಗೆ ಗಾಬರಿ. ತನ್ನ ಪತಿಯನ್ನು ಹೊರತುಪಡಿಸಿ ಉಳಿದ ಯಾರಿಗೂ ಕಾಣಿಸದ ಮಾಂಗಲ್ಯ, ಈ ಮಸಣವಾಸಿಗೆ ಕಾಣಿಸಿದ್ದು ಹೇಗೆ? ದುಃಖದ ನಡುವೆಯೂ ಅವಳಿಗೆ ಹೊಳೆಯುತ್ತದೆ: ಆ ಮಸಣವಾಸಿಯೇ ತನ್ನ ಪತಿ ಹರಿಶ್ಚಂದ್ರನೆನ್ನುವುದು.

ಲೋಹಿತಾಶ್ವನದ ಕಳೇಬರದ ಸಮ್ಮುಖದಲ್ಲಿ ನಡೆಯುವ ಚಂದ್ರಮತಿ–ಹರಿಶ್ಚಂದ್ರರ ನಡುವಿನ ಸಂವಾದದಲ್ಲಿ ಇಂದಿಗೆ ಬೇಕಾದ ಸಂಗತಿಯೊಂದಿದೆ. ಚಂದ್ರಮತಿಯ ಕತ್ತಿನಲ್ಲಿನ ತಾಳಿ ಅವಳ ಗಂಡನ ಹೊರತಾಗಿ ಬೇರೆ ಯಾರಿಗೂ ಕಾಣಿಸದಷ್ಟೆ. ಗಂಡನ ಹೊರತಾಗಿ ಉಳಿದವರ ಕಣ್ಣಿಗೆ ಆಕೆಯದು ಬರಿಗೊರಳು. ಆಶ್ಚರ್ಯದ ಸಂಗತಿಯೆಂದರೆ, ಚಂದ್ರಮತಿಯ ಬರಿಗೊರಳು ಸಮಾಜಕ್ಕೆ ಸಮಸ್ಯೆಯಾದ ಕುರಿತು ಹರಿಶ್ಚಂದ್ರನ ಕಥೆಯಲ್ಲೆಲ್ಲೂ ಪ್ರಸ್ತಾಪವಿಲ್ಲ. ವಿವಾಹಿತ ಸ್ತ್ರೀ, ಅದರಲ್ಲೂ ಎದೆಯುದ್ದದ ಮಗನನ್ನು ಹೊಂದಿರುವ ಮಹಿಳೆ ಮಾಂಗಲ್ಯವಿಲ್ಲದೆ ಇರುವುದು ಅಂದಿನ ಸಮಾಜಕ್ಕೆ ಪ್ರಶ್ನಾರ್ಹವಾಗಿ ಕಂಡಂತಿಲ್ಲ. ಕಾಶಿಯ ಪೇಟೆಬೀದಿಯಲ್ಲಿ ಗಂಡನಿಂದ ಮಾರಾಟಗೊಂಡ ಚಂದ್ರಮತಿ, ದಾಸಿಯಾಗಿ ಬ್ರಾಹ್ಮಣನ ಮನೆ ಸೇರಿ, ಒಡತಿಯಿಂದ ಪರಿಪರಿಯಾಗಿ ಶೋಷಣೆಗೊಳಗಾದರೂ, ಆಕೆಯ ಬರಿಗೊರಳಿನ ಬಗ್ಗೆ ಯಾರಿಂದಲೂ ಒಂದೂ ಹೀಯಾಳಿಕೆಯ ಮಾತಿಲ್ಲ. ತಾಳಿಯಿಲ್ಲದಿರುವುದು ಚಂದ್ರಮತಿಯ ಸೌಭಾಗ್ಯಕ್ಕೆ ಕುಂದು ತಂದಿಲ್ಲ. ಅದೇ ಚಂದ್ರಮತಿ ವರ್ತಮಾನದಲ್ಲಿ ಬದುಕಬೇಕಾಗಿ ಬಂದಿದ್ದರೆ, ಆಕೆ ಎಷ್ಟು ಕಣ್ಣುಗಳಿಗೆ ಆಹಾರ ಆಗಬೇಕಿತ್ತು? ಎಷ್ಟೆಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿತ್ತು?

ಸಮಾಜಕ್ಕೆ ಮಾತ್ರವಲ್ಲ, ಸ್ವತಃ ಹರಿಶ್ಚಂದ್ರ ಕೂಡ ತನ್ನ ಪತ್ನಿಯ ಕೊರಳಲ್ಲಿನ ಮಾಂಗಲ್ಯದ ಕುರಿತು ವಿಪರೀತ ಭಾವುಕನೇನಲ್ಲ. ಆಪತ್ತಿನ ಸಂದರ್ಭದಲ್ಲದು ಚಿನ್ನದ ತುಂಡಷ್ಟೇ ಎನ್ನುವ ವಾಸ್ತವದ ಅರಿವು ಅವನಿಗಿದೆ.

ಹರಿಶ್ಚಂದ್ರನ ಕಥೆಯಿಂದ ನಾವು ತಿಳಿಯಬೇಕಾದುದು: ಹೆಣ್ಣು ತಾಳಿಯನ್ನು ಧರಿಸುವುದರಿಂದ ಅಥವಾ ಧರಿಸದಿರುವುದರಿಂದ ಸಮಾಜಕ್ಕೆ ಆಗಬೇಕಾದುದೇನಿಲ್ಲ. ಅದು ಆಕೆಯ ಹಾಗೂ ಅವಳ ಗಂಡನ ಇಷ್ಟ ಹಾಗೂ ಅನುಕೂಲಕ್ಕೆ ಸಂಬಂಧಿಸಿದ್ದು.

ಕುಂಕುಮ, ತಾಳಿ, ಬಳೆಗಳು ಹಿಂದೂ ಮಹಿಳೆಯರ ಸೌಭಾಗ್ಯದ ಸಂಕೇತಗಳೆನ್ನುವುದು ಕೆಲವರ ನಂಬುಗೆ. ಆದರೆ, ಈ ನಂಬುಗೆಯ ಬೇರು ಹೆಚ್ಚು ಆಳವಾದುದಲ್ಲವೆನ್ನುವುದಕ್ಕೆ ‘ಹರಿಶ್ಚಂದ್ರ ಕಾವ್ಯ’ದ ಚಂದ್ರಮತಿಯೇ ನಿದರ್ಶನವಾಗಿದ್ದಾಳೆ. ಇದನ್ನು ಹೀಗೂ ಹೇಳಬಹುದು: ಹೆಣ್ಣಿನ ಸೌಭಾಗ್ಯ ನಿರ್ಧಾರಗೊಳ್ಳುವುದು ಅವಳ ನಡವಳಿಕೆ ಮತ್ತು ವ್ಯಕ್ತಿತ್ವದ ಸ್ವಂತಿಕೆಯಿಂದಲೇ ಹೊರತು, ಪತಿಯಿಂದಲ್ಲ. ಸಂಕೇತಗಳಿಗೂ ಹೆಣ್ಣಿನ ಸೌಭಾಗ್ಯಕ್ಕೂ ಸಂಬಂಧವಿಲ್ಲ. ಸಂಕೇತಗಳ ಮಾತಿರಲಿ, ಹೆಣ್ಣಿನ ಪಾಲಿಗೆ ಗಂಡನೇ ಸೌಭಾಗ್ಯ ಎನ್ನುವ ಮಾತನ್ನು ಸಮಸಮಾಜದ ಬಗ್ಗೆ ನಂಬಿಕೆಯುಳ್ಳ ಯಾರೇ ಆದರೂ ಒಪ್ಪಲಾಗದು. ಹಾಗಾದರೆ, ಮಂಗಳದ್ರವ್ಯಗಳೆಂದು ಕರೆಸಿಕೊಳ್ಳುವ ಈ ಸಂಕೇತಗಳಿಗೂ ಹೆಣ್ಣಿಗೂ ಇರುವ ಸಂಬಂಧವೇನು? ಈ ಸಂಬಂಧ ಅಲಂಕಾರಕ್ಕೆ ಸಂಬಂಧಿಸಿದ್ದು. ಸೌಂದರ್ಯವೃದ್ಧಿಯ ಸಾಧನಗಳ ರೂಪದಲ್ಲಷ್ಟೇ ಕುಂಕುಮ, ಹೂ, ಬಳೆಗೆ ಪ್ರಾಶಸ್ತ್ಯವೇ ಹೊರತು, ಅವುಗಳಲ್ಲಿ ಯಾವ ಸಿರಿಯೂ ಅಡಗಿಲ್ಲ. ಪೂಜೆಗೆ ಬಳಸುವುದರಿಂದ ಅವುಗಳನ್ನು ಮಂಗಳದ್ರವ್ಯಗಳೆನ್ನಬಹುದಾದರೂ, ಹೆಣ್ಣಿನ ವೈವಾಹಿಕ ಸ್ಥಿತಿಗೂ ಅವುಗಳಿಗೂ ಸಂಬಂಧ ಆರೋಪಿಸುವುದು ಸರಿಯಲ್ಲ. ವಿವಾಹಿತ ಮಹಿಳೆಯನ್ನು ಮಂಗಳದ್ರವ್ಯಗಳ ಅಲಂಕಾರದೊಂದಿಗೆ ಗುರ್ತಿಸುವ ಮನೋಭಾವ ಪುರುಷ ಯಾಜಮಾನ್ಯದಿಂದ ರೂಪುಗೊಂಡಿರುವಂತಹದ್ದು. ಗಂಡಿಗಿಲ್ಲದ ಮದುವೆಯ ಲಾಂಛನಗಳು ಹೆಣ್ಣಿಗೆ ಯಾಕೆ ಬೇಕು?

ಹೆಣ್ಣನ್ನು ದೇವಿ ಎನ್ನುವ ನಾವೇ, ಆ ದೈವತ್ವವನ್ನು ಅಲಂಕಾರಿಕ ಸಾಮಗ್ರಿಗಳಿಗೆ ಸೀಮಿತಗೊಳಿಸಬಯಸುತ್ತೇವೆ. ಎಂಥ ವೈರುಧ್ಯ? ಕುಂಕುಮ ಮತ್ತು ಮಾಂಗಲ್ಯದಿಂದ ವಿವಾಹಿತ ಮಹಿಳೆಯನ್ನು ಗುರ್ತಿಸುವುದು ಅವಳ ವ್ಯಕ್ತಿತ್ವವನ್ನು ಅವಮಾನಿಸಿದಂತೆ ಮಾತ್ರವಲ್ಲ; ಆ ಧೋರಣೆ ಗಂಡಿನ ಕಿಮ್ಮತ್ತನ್ನು ಕ್ಷುಲ್ಲಕಗೊಳಿಸುವಂತಹದ್ದೂ ಹೌದು. ಮಂಗಳದ್ರವ್ಯಗಳಲ್ಲಿ ಗಂಡಿನ ಅಸ್ತಿತ್ವ ಇರುವುದೆಂದಾದಲ್ಲಿ, ಅದು ಯಾವ ಗಂಡಿಗಾದರೂ ಮರ್ಯಾದೆ ತರುವ ಸಂಗತಿಯೆ?

ವಿವಾಹಿತ ಹೆಣ್ಣಿಗೆ ಕುಂಕುಮ, ಬಳೆ ಅಗತ್ಯವೆಂದು ಯಾವ ಹೆಣ್ಣಾದರೂ ಅನ್ನಿಸಿದರೆ ಅದರಲ್ಲಿ ತಪ್ಪೇನೂ ಇಲ್ಲ. ಹಾಗೆಯೇ, ಮಂಗಳದ್ರವ್ಯಗಳನ್ನು ಕೇವಲ ಅಲಂಕಾರಿಕ ಸಾಮಗ್ರಿಗಳೆಂದು ಯಾರಾದರೂ ಭಾವಿಸಿದರೆ ಅದರಲ್ಲೂ ತಪ್ಪಿಲ್ಲ. ಸಮಸ್ಯೆ ಇರುವುದು, ಒಬ್ಬರ ನಂಬಿಕೆಯನ್ನು ಇನ್ನೊಬ್ಬರ ಮೇಲೆ ಹೇರಲು ಹೊರಟಾಗ. ಮಂಗಳದ್ರವ್ಯಗಳಿಂದ ಹೆಣ್ಣಿನ ನಡತೆ ಅಳೆಯಲು ಹೊರಡುವವರೂ ಇದ್ದಾರೆ. ಮಂಗಳದ್ರವ್ಯಗಳಿಂದ ಹೆಣ್ಣಿನ ವ್ಯಕ್ತಿತ್ವವನ್ನು ಅಳೆಯುವುದು, ಕಷಾಯ ವಸ್ತ್ರ ತೊಟ್ಟವರನ್ನೆಲ್ಲ ಜಿತೇಂದ್ರಿಯರು ಎಂದು ಭಾವಿಸಿದಂತಾಗುತ್ತದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಸ್ನೇಹಿತ ನಿಸರ್ಗ ಕೊಟ್ಟಿರುವ ಸೋದರ. ಸ್ನೇಹಿತರನ್ನು ಹೊಂದಿರುವವರೇ ನಿಜವಾಗಿ ಧನ್ಯರು.

  —ನಿರಂಜನ

- ಪರಿಸ್ಥಿತಿಯು ಪ್ರತಿಕೂಲವಾಗಿರುವಾಗ ಮಾತನಾಡುವುದೂ ಸಾಹಸವೇ.

  —ರಂ.ಶ್ರೀ. ಮುಗಳಿ

- ದೈವ ಸಹಾಯವಿಲ್ಲದೆ ಜಯವಿಲ್ಲ, ಸ್ವಪ್ರಯತ್ನವಿಲ್ಲದೆ ದೈವ ಸಹಾಯವೂ ಇಲ್ಲ.

  —ಡಿ.ವಿ.ಜಿ.

- ಕಾಲ ಯಾವುದೇ ಕಾರಣಕ್ಕೂ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು ನಿಂತಲ್ಲೇ ನಿಂತಿರಬೇಕಾಗುತ್ತದೆ.

  —ಶಿವರಾಮ ಕಾರಂತ

- ನಿಮ್ಮ ಮುಖವನ್ನು ಯಾವತ್ತೂ ಸೂರ್ಯನಿಗೆ ಅಭಿಮುಖವಾಗಿಟ್ಟುಕೊಳ್ಳಿ. ನೆರಳು ಹಿಂದಕ್ಕೆ ಸರಿಯುತ್ತದೆ.

  —ವಾಲ್ಟ್ ವಿಟ್ಮನ್

- ಜೀವನ ಪ್ರತಿಯೊಬ್ಬ ಜೀವಿಗೂ ದೇವರು ಕೊಟ್ಟ ವರ. ಅದನ್ನು ಅಲ್ಲಗಳೆಯಬೇಡಿ.

  —ಸ್ವಾಮಿ ವಿವೇಕಾನಂದ

- ಇವತ್ತಿನ ಹಾರೈಕೆ, ನಾಳಿನ ಪೂರೈಕೆ, ಇಂದಿನ ಕನಸು, ನಾಳೆಯ ನನಸು.

  —ಕುವೆಂಪು

- ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರದ್ದಾಗಿ ಕಾಣುವುದಿಲ್ಲ.

  —ಮಹಾತ್ಮಗಾಂಧಿ